## ಆಲೆಕಣೆ

ಈ ಆಕಾರವು ಯಾವುದೋ ಪುರಾತನ ಕಾಲದ ಫಿರಂಗಿಯೊ ಅಥವಾ ಆ ಕಾಲದ ರಾಜರ ಯುದ್ಧ ಸಾಮಗ್ರಿ ತರಹ ಕಾಣುತ್ತದೆಯಲ್ಲವೆ? ಆದರೆ, ಇದು ನೂರು ವರ್ಷಕ್ಕೂ ಹಿಂದಿನ ಮರದ ಆಲೆಕಣೆ. 'ಆಲೆಮನೆ'ಗಳಲ್ಲಿ ಕಬ್ಬನ್ನು ನುರಿಸಿ, ಕಬ್ಬಿನ ರಸ ತೆಗೆಯುವ ಆ ಕಾಲದ ಮರದ ಒಂದು ಗಾಣವಿದು. ಇಂತಹ ಎರಡು ಗಾಣಗಳನ್ನು ಒಂದು ಸಲಕರಣೆಗೆ ಒಟ್ಟಾಗಿ ಜೋಡಿಸಿ, ಅವನ್ನು ಕೋಣಗಳ ಸಹಾಯದಿಂದ ತಿರುಗಿಸಿ ಕಬ್ಬನ್ನು ನುರಿಸುವ ಪದ್ಧತಿ ಹಿಂದೆ ರೂಢಿಯಲ್ಲಿತ್ತು.

ಇಂದು ಕಬ್ಬು ನುರಿಸುವ ಸುಧಾರಿತ ಕಬ್ಬಿಣದ ಗಾಣಗಳು ಬಳಕೆಗೆ ಇರುವುದರಿಂದ ಇಂತಹ ಮರದ ಗಾಣಗಳು ಅಟ್ಟ ಸೇರಿವೆ. ಇಂತಹ ಎಷ್ಟೋ ಮರದ ಗಾಣಗಳು ನಿರುಪಯುಕ್ತವೆನಿಸಿ ಒಲೆಗೆ ಉರುವಲಾಗಿವೆ. ಅಂದಿನ ಮರದ ಕಬ್ಬಿನಗಾಣವನ್ನು ಸುಸ್ಥಿತಿಯಲ್ಲಿ ನೋಡಲು ಸಿಗುವುದೂ ಅಪರೂಪವೇ ಆಗಿದೆ.

—ಅರ್ಚನಾ ಬೊಮ್ನಳ್ಳಿ, ಶಿರಸಿ





## ಕೆಳದಿಯ ಕಣ್ಣಪ್ಪ

ಕೆಳದಿಯ ವೀರಭದ್ರ ದೇಗುಲವು ಅದ್ವಿತೀಯ ಶಿಲ್ಪಕಲೆಗೆ ಹೆಸರಾಗಿದೆ. ಈ ದೇವಾಲಯದ ಹೊರಾಂಗಣದಲ್ಲಿ ಅನೇಕ ಕಲಾಕೃತಿಗಳು ಕಾಣಸಿಗುತ್ತವೆ. ಅಂತಹ ಸುಂದರವಾದ ಕೆತ್ತನೆಗಳಲ್ಲಿ ಬೇಡರ ಕಣ್ಣಪ್ಪನ ಶಿಲ್ಪವೂ ಒಂದು. ಕೆಳದಿ ಶಿವಮೊಗ್ಗ ಜಿಲ್ಲೆಯ ಸಾಗರದಿಂದ ಸುಮಾರು 8 ಕಿ.ಮೀ. ದೂರದಲ್ಲಿರುವ ಹಸಿರಿನ ಸುಂದರ ತಾಣ. ಕೆಳದಿಯ ಪ್ರಸಿದ್ಧ ಅರಸನಾಗಿದ್ದ ಶಿವಪ್ಪ ನಾಯಕ ತನ್ನ ಆಡಳಿತ ಕಾಲದಲ್ಲಿ ವ್ಯಾಪಾರಿಗಳನ್ನು, ಕುಶಲಕರ್ಮಿಗಳನ್ನು ಆಕರ್ಷಿಸಿ ವ್ಯಾಪಾರವನ್ನು ವಾಣಿಜ್ಯವನ್ನು ಉತ್ತಮಪಡಿಸಿದನು. ನಾಯಕ ಜಾರಿಗೆ ತಂದಿದ್ದ ಕಂದಾಯ ವ್ಯವಸ್ಥೆಗೆ ಅತ್ಯಂತ ಶಿಸ್ತು ನೀಡಿದ್ದರಿಂದ ಶಿವಪ್ಪ ನಾಯಕನ ಶಿಸ್ತು ಎಂದೇ ಖ್ಯಾತಿ ಪಡೆಯಿತು.

—ಎಸ್. ಪ್ರಭಾವತಿ, ಬೆಂಗಳೂರು

## ಕಣ್ಮರೆಯಾದ ಗುಬ್ಬಿ ಚಟ್ಟು!

ಧಾರವಾಡ ಜಿಲ್ಲೆ ಕೊಡ್ಲವಾಡದ ನಮ್ಮ ಸಂಬಂಧಿಕರ ಮನೆಯಲ್ಲಿ ಗುಬ್ಬಿ ಚಟ್ಟಿದೆ. ಎಪ್ಪತ್ತು ವರ್ಷದ ಹಿಂದೆ ತನ್ನ ಕಂದಮ್ಮನನ್ನು ರಮಿಸಲು ಅನುಸೂಯಮ್ಮ ಎನ್ನುವವರು ಈ ಗುಬ್ಬಿ ಚಟ್ಟನ್ನು ಸ್ವತಃ ತಯಾರಿಸಿದ್ದರು. ಮೇಲ್ಭಾಗದಲ್ಲಿ ತೊಟ್ಟಿಲಿನಲ್ಲಿ ಮಲಗಿದ ಮಗುವಿಗೆ ಕಾಣುವಂತೆ ಇದನ್ನು ತೂಗು ಬಿಡಲಾಗುತ್ತದೆ. ಇದರಲ್ಲಿ ವಿಧ ವಿಧದ ಗುಬ್ಬಿಗಳು, ಗೊಂಬೆಗಳು, ನಾಯಿಗಳು, ಬಾತುಗೋಳಿಗಳು, ಬಣ್ಣದ ಚೆಂಡುಗಳು, ಮಣಿಗಳು ಮತ್ತು ಬಟ್ಟೆಗಳನ್ನು ಬಳಸಿ ತಯಾರಿಸಿದ್ದಾರೆ. ಸುತ್ತಲೂ ಗಾಜಿನ ಚಿಕ್ಕ ಚಿಕ್ಕ ಕೊಳವೆಗಳನ್ನು ತೂಗುಬಿಡಲಾಗಿದೆ. ತೊಟ್ಟಿಲು ತೂಗಿದಾಗ ಇವೆಲ್ಲ ಘಲ್ ಘಲ್ ಶಬ್ದ ಮಾಡುತ್ತವೆ. ಆಗ ಮಗು ಶಬ್ದದ ಮೋಡಿಗೆ ಒಳಗಾಗಿ ಕಿಲ ಕಿಲ ನಗುತ್ತ ಆಡಿಕೊಳ್ಳುತ್ತದೆ. ಹೇಗಿದೆ ನೋಡಿ ನಮ್ಮ ಜನಪದರ ಸೃಜನಾತ್ಮಕ ಐಡಿಯಾ?

—ಪ್ರಕಾಶ.ಎಸ್.ಮನ್ನಂಗಿ, ಮೋಟೆಬೆನ್ನೂರು

